10

# ವಿಕಾಸವಾದವು ನಂಬಲರ್ಹವಾದದ್ದೋ?

> ಎಲೈ ತಿಮೊಥೆಯನೇ, ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವದನ್ನೇ ಕಾಪಾಡು. ಕೆಲವರು ಆ ಸುಳ್ಳಾದ ಜ್ಞಾನವನ್ನು ಅವಲಂಭಿಸಿ ಕ್ರಿಸ್ತನಂಬಿಕೆಯಿಂದ ಭ್ರಷ್ಟರಾದರು ... (1 ತಿಮೊಥೆ 6:20, 21).

ಕ್ರೈಸ್ತರನ್ನು ಶೋಧಿಸುವುದಕ್ಕಾಗಿ ನಂಬಿಕೆಗೆ ನಾಶಕರವಾಗಿರುವ ಸಿದ್ಧಾಂತಗಳು ಏಳುವವು ಎಂಬುದನ್ನು ಸರ್ವಶಕ್ತನಾದ ದೇವರು ತಿಳಿದಿದ್ದನು. ಆ ಸಿದ್ಧಾಂತಗಳಲ್ಲಿ ಕೆಲವು ಹೆಚ್ಚು ನ್ಯಾಯ ಸಮ್ಮತವಾದವುಗಳಂತೆ ತೋರುವವು, "ವೈಜ್ಞಾನಿಕ" ತೊಡುಗೆಗಳಲ್ಲಿ ನಡೆಯುವವು ಮತ್ತು "ವ್ಯರ್ಥತ್ವದ ಹಟಮಾರಿ ಮಾತುಗಳನ್ನು" ಆಡುವರು (2 ಪೇತ್ರ 2:18) ಎಂದೂ ಆತನು ತಿಳಿದಿದ್ದನು. ಆದುದರಿಂದ ತಂದೆಯು ತನ್ನ ಮಕ್ಕಳಿಗೆ ನಿತ್ಯವಾದ ಪುಸ್ತಕದಲ್ಲಿ "ಜ್ಞಾನವೆಂದು 'ಸುಳ್ಳಾಗಿ ಕೆರೆಯಲ್ಪಡುವ ವಿರೋಧಿಸುವ ವಾದಗಳ' " ಬಗ್ಗೆ ಎಚ್ಚರವಾಗಿರಬೇಕೆಂದು ಹೇಳುತ್ತಾನೆ.

ಕ್ರೈಸ್ತರು ನಿಜವಾದ ವಿಜ್ಞಾನಕ್ಕೆ ವಿರೋಧಿಗಳಾಗಿರುವದಿಲ್ಲ. ದೇವರು ನಿಜವಾದ ವಿಜ್ಞಾನದ ಕರ್ತೃವಾಗಿದ್ದಾನೆ, ಯಾಕಂದರೆ ವಿಜ್ಞಾನವು ಜ್ಞಾನವಾಗಿದೆ. ದೇವರಲ್ಲಿ ಮತ್ತು ಆತನ ಕ್ರಿಸ್ತನಲ್ಲಿ "*ಜ್ಞಾನವಿದ್ಯಾ* ಸಂಬಂಧವಾದ ಎಲ್ಲಾ ನಿಕ್ಷೇಪಗಳು ಅಡಗಿಕೊಂಡಿವೆ" (ಕೊಲೊಸ್ಸೆ 2:3; ಒತ್ತಿ ಹೇಳಿದ್ದು ನನ್ನದು). ಸೃಷ್ಟಿಯಲ್ಲಿಯ ದೇವರ ಜ್ಞಾನವು ಯಾವಾಗಲು ಪ್ರಕಟನೆಯಲ್ಲಿಯ (ಬೈಬಲ್) ದೇವರ ಜ್ಞಾನದೊಂದಿಗೆ ಒಪ್ಪಿಕೊಳ್ಳುತ್ತದೆ; ಅಲ್ಲಿ ಎಂದೂ ಘರ್ಷಣೆ ಇರುವದಿಲ್ಲ. ಸೃಷ್ಟಿಯ ಬಗ್ಗೆ ಮನುಷ್ಯನ ಊಹೆಗಳು ದೇವರ ಪ್ರಕಟನೆಯೊಂದಿಗೆ ಘರ್ಷಣೆಯಲ್ಲಿ ಇರಬಹುದು, ಆದರೆ ನಂಬಿಗಸ್ಥ ಕ್ರೈಸ್ತರು ಮಾನುಷ್ಯನ ಊಹೆಗಳನ್ನು ನಿಜವಾದ ವಿಜ್ಞಾನದಿಂದ ಯಾವಾಗಲೂ ಬೇರೆಯಾಗಿಡತಕ್ಕದ್ದು. ಮನುಷ್ಯನು ತಿಳಿಯುವಂಥದ್ದು, ಅವನು ತಿಳಿದಿರುವೆನೆಂದು ಅವನು ಯೋಚಿಸುವನೋ ಅದರಿಂದ ಭಿನ್ನವಾಗಿರಬಹುದು ಮತ್ತು ಯೇಸುವಿನ ಶಿಷ್ಯರು ಮನುಷ್ಯನ ಅಭಿಪ್ರಾಯಗಳ ಕಾರಣದಿಂದ ಬೈಬಲನ್ನು ತೆಗೆದು ಹಾಕಲು ಸಿದ್ಧರಿರುವದಿಲ್ಲ.

ಕ್ರೈಸ್ತರು ವಿಜ್ಞಾನದ ಕಡೆಗೆ ದುರಾಭಿಪ್ರಾಯವುಳ್ಳವರೂ, ಅಪ್ರಾಮಾಣಿಕರೂ ಆಗಿರುವರೆಂದು ಅನೇಕ ಸಲ ದೂರಲ್ಪಟ್ಟಿದ್ದಾರೆ. ಅದು ಸುಳ್ಳು ದೂರಾಗಿರುವುದು, ಆದರೆ ಅದು ಹಾಗೆಯೇ ಇದ್ದರೂ, ವಿಕಾಸವಾದಿಗಳೂ ಅದೇ ತಪ್ಪಿಗೆ ಒಳಗಾಗಿದ್ದಾರೆ. ಅವರಲ್ಲಿ ಒಬ್ಬನು, ಪಕ್ಷಪಾತವುಳ್ಳ ಮನುಷ್ಯನನ್ನು ತೃಪ್ತಿಪಡಿಸಲು ಸೃಷ್ಟಿಯಲ್ಲಿ ಸಾಕಷ್ಟು ಸಂಗತಿಗಳನ್ನು ಕಂಡುಕೊಳ್ಳದೇ, ವಿಕಾಸವಾದವನ್ನು "ರುಜುವಾತು" ಪಡಿಸಲು ನಿಜವಾಗಿಯೂ ಮಾಹಿತಿಯನ್ನು ಸುಳ್ಳಾಗಿ ಮಾಡಿದ್ದಾನೆ. ಅರ್ನೆಸ್ಟ ಹೆಕ್ಕಲನು "ಭ್ರೂಣಗಳ ಉದಾಹರಣೆಗಳನ್ನು ಸುಳ್ಳೆಂದು ಸಾಧಿಸಿದ್ದಲ್ಲದೇ, ಅವು ಮೂಲದಲ್ಲಿ ಹೊಂದಿದ್ದ ಹೆಸರುಗಳನ್ನು ಬಿಟ್ಟು ಬೇರೆ ಹೆಸರುಗಳನ್ನು ಕೊಟ್ಟಿದ್ದಾನೆ. ಇದರಿಂದ ಪ್ರೊಫೆಸರ್

ಅಂಟನ್ ಅವರು ರೋಷಗೊಂಡು ಬಹಿರಂಗವಾಗಿ ಹೆಕ್ಕೆಲನು ಸುಳ್ಳು ಹೇಳುತ್ತಿದ್ದಾನೆಂದು ಘೋಷಿಸುವಂತಾಯಿತು, "ನಿರ್ದಿಷ್ಟವಾದ ಜ್ಞಾನದಿಂದ ಈ ದೂರುಗಳನ್ನು ನಾನು ಮಾಡುತ್ತೇನೆ. ನೇರವಾಗಿ ಹೊಂದಿಕೊಂಡಿದ್ದೇನೆ, ಹೆಕ್ಕೆಲನಿಗಾಗಿ ನಿಜವಾದ ಚಿತ್ರಗಳನ್ನು ನಾನೇ ಮಾಡಿದ್ದೇನೆ ಎಂದು ಹೇಳಿದನು [ಪ್ರೊಫೆಸರ್ ಆರ್ನೊಲ್ಡ್ ಬ್ರಾಸ್]."[1] ಒಂದು ಮೋಸಕಾರ್ಯದಲ್ಲಿ ಹಿಡಿಯಲ್ಪಟ್ಟು, ವಿಜ್ಞಾನಿಯೆಂದು ಕರೆದುಕೊಳ್ಳುತ್ತಿದ್ದವನು ತಾನೇ ಹೀಗೆ ಒಪ್ಪಿಕೊಂಡನು, "ನನ್ನ ರೇಖಾ ಚಿತ್ರಗಳಲ್ಲಿ ಸ್ವಲ್ಪವುಗಳು ನಿಜವಾಗಿಯೂ ಖೊಟ್ಟಿ ಚಿತ್ರಗಳಾಗಿರುತ್ತವೆ ಎಂದು ಪಶ್ಚಾತ್ತಾಪದ ಅಳಿಕೆಯೊಂದಿಗೆ ಕೂಡಲೇ ಪ್ರಾರಂಭಿಸು ತ್ತೇವೆ."[2] ಬೈಬಲ್ ವಿಶ್ವಾಸಿಗಳು ನಿಜವಾಗಿಯೂ ತಮ್ಮ ವಿಷಯಗಳನ್ನು ರುಜುವಾತು ಪಡಿಸಲು ಸುಳ್ಳು ಸಂಗತಿಗಳನ್ನು ಉಪಯೋಗಿಸಿದ ಅಪರಾಧಿಗಳಾಗಿರವದಿಲ್ಲ: ಸತ್ಯಕ್ಕೆ ಅಂಥ ಆಧಾರದ ಅಗತ್ಯತೆಯಿಲ್ಲ ಹಾಗೂ ಅಂಥದನ್ನು ಹೊಂದಿಕೊಳ್ಳುವದಿಲ್ಲ.

ಹೀಗಿದ್ದರೂ ಪರಿಣಾಮ ತತ್ವವು ಅದನ್ನು ಎತ್ತಿಹಿಡಿಯಲು ಮೋಸದಾಟವು ಉಪ ಯೋಗಿಸಲ್ಪಟ್ಟದ್ದರಿಂದ ನಿರಾಶೆಗೊಂಡಿಲ್ಲ. ಪರಿಣಾಮ ವಿಚಾರದಲ್ಲಿ ನಂಬುವದಕ್ಕಾಗಿ ಅದರ ಆರಾಧಕರಲ್ಲಿ ಯಾವ ಕಾರಣಗಳಿವೆ? ಪರಿಣಾಮವಾದಿಯು ಕೊಡುವ ಬಲ ವಾದ ಪುರಾವೆಗಳ ಬಗ್ಗೆ ತಾವು ಭಯಪಡುವದಿಲ್ಲ ಎಂದು ಹೇಳುವಾಗ ಕ್ರೈಸ್ತರು ಬಡಾಯಿ ಕೊಚ್ಚಿಕೊಳ್ಳುವದಿಲ್ಲ; ಯಾಕಂದರೆ ಸತ್ಯವು ಸತ್ಯವೇ ಆಗಿರುತ್ತದೆ. ಪರಿಣಾಮವು ಸತ್ಯವಾಗಿದ್ದರೆ (ಅದು ಹಾಗಿರುವದಿಲ್ಲ), ಅದನ್ನು ಎದುರಿಸುವುದು ಕ್ರೈಸ್ತರಿಗೆ ಯಾವ ಒಳ್ಳೆಯದನ್ನೂ ಮಾಡುವದಿಲ್ಲ.

## ಅತೀ ಬಲವಾದ ರುಜುವಾತುಗಳು

(1) *ಹೋಲಿಕೆಗಳು.* ವಿಕಾಸವಾದಕ್ಕೆ ಬಹಳ ಸಾಮಾನ್ಯವಾದ ವಾದವು "ಬಾಲವಿಲ್ಲದ ಕೋತಿಯು ಮನುಷ್ಯನಿಗೆ ಎಷ್ಟು ಹೋಲಿಕೆಯಲ್ಲಿದೆಯಲ್ಲವೇ?" ಎಂಬುದು. ಮನುಷ್ಯನು ಬಾಲವಿಲ್ಲದ ಕೋತಿಯಿಂದ ವಿಕಾಸವಾದನು ಎಂಬುದನ್ನು ರುಜುವಾತು ಪಡಿಸಿದರೆ, ಒಂದು ಫೋರ್ಡ ವಾಹನದಿಂದ ಒಂದು ಕ್ಯಾಡಿಲ್ಲಾಕ ವಾಹನವು ವಿಕಸಿತಗೊಂಡಿತು ಎಂಬುದನ್ನು ರುಜುವಾತು ಪಡಿಸುತ್ತದೆ, ಯಾಕಂದರೆ ಅವುಗಳಲ್ಲಿ ಆಶ್ಚರ್ಯಕರವಾದ ಹೋಲಿಕೆಗಳು ಇರುತ್ತವೆ. ಮನುಷ್ಯನು ಮತ್ತು ಪ್ರಾಣಿ ಗಳು ಒಂದು ರೀತಿಯಲ್ಲಿ ಹೋಲಿಕೆಯಲ್ಲಿರುವದರಿಂದ, "ಅದೇ ದೊಡ್ಡ ದೇವರು ಎಲ್ಲವುಗಳ ನಿರ್ಮಾಣಿಕನು ಎಂಬುದನ್ನು ತೋರಿಸುತ್ತದೆ" ಎಂದು ತಾರ್ಕಿಕವಾಗಿ ಹೇಳಬೇಕಾಗುತ್ತದೆ.

(2) *ಸಂಕ್ಷಿಪ್ತ ಮಾಡುವದು.* ಮಾನವ ಭ್ರೂಣವು ಪರಿಣಾಮ ಚರಿತ್ರೆಯ ಮಿಲಿಯಗಟ್ಟಲೆ ವರ್ಷಗಳ ಚರಿತ್ರೆಯನ್ನು ಗರ್ಭಧಾರಣೆಯ ಒಂಭತ್ತು ತಿಂಗಳ ಅವಧಿಯಲ್ಲಿ "ಸಂಕ್ಷೇಪಿಸುತ್ತದೆ" - ಅದು ಮೀನಿನಿಂದ ಹರಿದಾಡುವ ಜಂತುವಾಗಿ, ಪಕ್ಷಿಯಿಂದ ಸಸ್ತನಿಯಾಗಿ ಬದಲಾಗುವುದು ಎಂಬ ವಿಚಾರಕ್ಕೆ ಇನ್ನೂ ಕೆಲವರು ಅಂಟಿಕೊಂಡಿರುತ್ತಾರೆ. ಇಂಥ ಎಲ್ಲಾ ಕಾಡು ಕಲ್ಪನೆಯು ಹಾಸ್ಯಾಸ್ಪದವಾಗಿ ತೋರಿಸಲ್ಪಟ್ಟಿದೆ. ಯಾಕಂದರೆ (a) "ಸಂಕ್ಷೇಪಿಸುವ" ನಿಯಮವು ಸಸ್ಯಗಳಿಗೆ ಅನ್ವಯವಾಗುವದಿಲ್ಲ, ಅವುಗಳಿಗೆ ಅದೇ ಪೂರ್ವಿಕತೆ ಇರುತ್ತದೆ, ಮತ್ತು (b) ಬಾಲವಿಲ್ಲದ ಕೋತಿಯ ಭ್ರೂಣದ ತಲೆಬುರುಡೆಯು, ಅದು ಬಾಲವಿಲ್ಲದ ಕೋತಿಯಕ್ಕಿಂತ ಹೆಚ್ಚಾಗಿ ಮನುಷ್ಯನ ತೆಲೆಬುರುಡೆಯಂತೆ ಕಾಣುತ್ತದೆ. ಇದರ ಅರ್ಥ ("ಸಂಕ್ಷೇಪಿಸುವದಕ್ಕೆ" ಅನುಗುಣವಾಗಿ) ಬಾಲವಿಲ್ಲದ ಕೋತಿಯು ಮನುಷ್ಯನಾಗುತ್ತದೆ ಮತ್ತು ಆ ಮೇಲೆ ಒಂದು ಬಾಲವಿಲ್ಲದ ಕೋತಿಯಾಗಿ

ಬದಲಾವಣೆ ಹೊಂದುತ್ತದೆ.

(3) ರಕ್ತದ ಪರೀಕ್ಷೆಗಳು. ರಕ್ತ ಪರೀಕ್ಷೆಗಳ ಹುಚ್ಚುತನವು, ಮೂವತ್ನಾಲ್ಕು ಮಾನವರು ಪರೀಕ್ಷಿಸಲ್ಪಟ್ಟಿದ್ದರಲ್ಲಿ ಏಳು ಮಾನವರದ್ದೆಂದು ಗುರುತಿಸಲ್ಪಟ್ಟು ಮತ್ತು ಮೂರು "ಮಧ್ಯಮ" ಎಂದು ಗುರುತಿಸಲ್ಪಟ್ಟದ್ದರಲ್ಲಿ ತೋರಿಸಲ್ಪಟ್ಟಿದೆ.3 ಇದಲ್ಲದೇ, ಪರೀಕ್ಷೆಯ ಪರಿಣಾಮಗಳು ಎಂಟು ಬಾಲವಿಲ್ಲದ ಕೋತಿಗಳಿಗೆ ಸಂಪೂರ್ಣವಾಗಿ ಮಾನವ ರಕ್ತ ಇತ್ತು ಎಂಬುದನ್ನು ತೋರಿಸಿದನು - ಆದುದರಿಂದ, ಪರೀಕ್ಷೆಗಳು ನಂಬಲರ್ಹವಾದವುಗಳಾಗಿದ್ದರೆ, ಬಾಲವಿಲ್ಲದ ಕೋತಿಗಳು ಕೆಲವು ಮಾನವರಿಗಿಂತ ಹೆಚ್ಚು ಮಾನವರಾಗಿರುತ್ತವೆ. ಅಂಥದೇ ರಕ್ತ ಪರೀಕ್ಷೆಗಳು ಹಂದಿಗೆ ಸಮೀಪದ ಸಂಬಂಧಿ ತಿಮಿಂಗಲ ಎಂದು ಸೂಚಿಸಿದವು ಮತ್ತು ತಿಮಿಂಗಲಿಗೆ ಸಮೀಪದ ಸಂಬಂಧಿ ತೊಗಲ ಬಾವಲಿ ಎಂದು ತೋರಿಸಿದವು.

(4) *ಉತ್ಪಾದಿಸುವವರ ಉತ್ಪನ್ನಗಳು.* ತಳಿ - ಅಭಿವೃದ್ಧಿ ಮಾಡುವವರು ಅತ್ಯುತ್ತಮ ಕುದುರೆಗಳನ್ನೂ ರೇಸ್ ಕುದುರೆಗಳನ್ನೂ, ಹಾಗೆಯೇ ಮಾಂಸಕ್ಕಾಗಿಯೂ ಹಾಲಿಗಾಗಿಯು ದನಗಳನ್ನೂ ಬೆಳಿಸಲು ಶಕ್ತರಾಗಿದ್ದರೂ, ಕುದುರೆಗಳನ್ನು ಇಲ್ಲವೇ ದನಗಳನ್ನು ಉತ್ಪಾದಿಸಲು ಶಕ್ತರಾಗಿದ್ದಾರೆ - ಹೊಸದನ್ನು ಉತ್ಪಾದಿಸಲು ಶಕ್ತರಾಗಿಲ್ಲ. ಅವರು ಎಷ್ಟು ಸಲ ಕುದುರೆಗಳನ್ನು ಉತ್ಪಾದಿಸಿದರೂ ಕುದುರೆಯನ್ನು ಬಿಟ್ಟು ಬೇರೆ ಯದನ್ನು ಉತ್ಪಾದಿಸಲು ಶಕ್ತರಾಗಿಲ್ಲ. ಎರಡು ಶತಮಾನಗಳವರೆಗೆ ಪ್ರಯತ್ನಿಸಿದ್ದು ವಿಕಾಸವಾದಕ್ಕೆ ವಿರುದ್ಧವಾಗಿ ತೀರ್ಪುಕೊಟ್ಟಿರುತ್ತದೆ. ಕೃತ್ರಿಮ ಗರ್ಭಧಾರಣೆಯು ಹೊಸ ತಳಿಗಳನ್ನು ಉತ್ಪಾದಿಸಲಾಗದ್ದರಿಂದ, ನಡಿಸಲ್ಪಡದ, ವಿಚಾರಿಸಲ್ಪಡದ ಪರಿಣಾಮವು ಹೇಗೆ ಮಾಡಬಲ್ಲದು? ಒಬ್ಬನು ಕುದುರೆಗಳ ಬಗ್ಗೆ ಯೋಚಿಸುವಾಗ ಹಳೇ ಮಿಶ್ರಜಾತಿಯ ಪ್ರಾಣಿಯು ವಿಕಾಸವಾದಿಗಳ ಮಾರ್ಗದಲ್ಲಿ ನಿಲ್ಲುತ್ತದೆ. ಎರಡೂ ಒಂದೇ ಚಾತಿಯವುಗಳ ಕುದುರೆ ಮತ್ತು ಕತ್ತೆಯ ಉತ್ಪನ್ನವು ಹೈಬ್ರೀಡ, ಅಂದರೆ ಮಿಶ್ರ ಜಾತಿಯ ಪ್ರಾಣಿಯಾಗುತ್ತದೆ. ಹಾಗಿದ್ದರೂ ಮಿಶ್ರಜಾತಿಯ ಪ್ರಾಣಿಯು ತನ್ನನ್ನು ತಾನೇ ಉತ್ಪಾದಿಸಿಕೊಳ್ಳಲಾರದು; ಹೊಸ ತಳಿಯು ರೂಪಿಸಲ್ಪಡಲಾರದು. ಮಿಶ್ರ ಜಾತಿಯ ಪಶುವಿನಂತೆ ಸೃಷ್ಟಿಯ ಎಲ್ಲವೂ ಕಠಿಣವಾದದ್ದಾಗಿರುತ್ತದೆ; ಅದು ವಿಜ್ಞಾನಿಗಳ ಇನ್ನೊಂದು ಬೆಳೆಯ ಹೊಸ ಊಹನೆಗಳೊಂದಿಗೆ ಬದಲಾಗುವದನ್ನು ನಿರಾಕರಿಸುತ್ತದೆ.

(5) *ಕುರುಹುಗಳಾದ ಅಂಗಗಳು.* ಮನುಷ್ಯನ ಅಪೆಂಡಿಕ್ಸ್, ಅವನ ಪಿನಿಯಲ್ ಗ್ಲಾಂಡ ಮತ್ತು ಥೈರೊಡ್ ಗ್ಲಾಂಡಗಳು ವಿಕಾಸವಾಗುತ್ತಿದ್ದ ದೇಹದ ಹಿಂದಿನ ಅಂಗಗಳ ಒಣಗಿಹೋದ ಉಳುಹುಗಳು ಎಂದು ವಿಕಾಸವಾದಿಗಳಿಂದ ವಿಚಾರಿಸಲ್ಪಟ್ಟಿವೆ. ಆ ಅಂಗಗಳ ಯಾವುದೇ ಉಪಯುಕ್ತ ಉದ್ದೇಶದ ಬಗ್ಗೆ ಅವರು ಅಜ್ಞಾನಿಗಳಾಗಿದ್ದದರಿಂದ, ಪರಿಣಾಮವನ್ನು ರುಜುವಾತು ಪಡಿಸಲು ಉತ್ಸುಕರಾಗಿದ್ದುದರಿಂದ ತೋರಿಕೆಯ ಊಹೆ ಮಾಡಿದರು. ಈಗ ನಿಜವಾದ ವಿಜ್ಞಾನವು ಆ ಅಂಗಗಳ ದೇವರು ಕೊಟ್ಟ ಉದ್ದೇಶಗಳನ್ನು ಒಂದರ ನಂತರ ಒಂದರ ಬಗ್ಗೆ ಕಂಡುಕೊಳ್ಳುತ್ತಿದ್ದಾರೆ. ಥಾಯರೊಡ್‌ದ ವಿಸರ್ಜನೆ, ಹೆಚ್ಚಾಗಿ ಅಯೊಡಿನಿನಿಂದ ರಚಿಸಲ್ಪಟ್ಟದ್ದು ಆರೋಗ್ಯಕ್ಕೆ ಅತೀ ಅಗತ್ಯವಾದದ್ದೆಂದು ತಿಳಿಯಲ್ಪಟ್ಟಿದೆ. ಪಿನಿಯಲ್ ಗ್ಲಾಂಡ ಮೂರನೆಯ ಕಣ್ಣಿನ ಉಳಿಯುವಿಕೆಯಾಗಿರುವದರ ಬದಲು ಅದು ದೇಹದ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ ಎಂದು ವಿಜ್ಞಾನಿಗಳು ಈಗ ತಿಳಿದಿರುವರು.[4] ಅಪೆಂಡಿಕ್ಸ್ ಸಹ ಬೆಲೆಯುಳ್ಳ ಅಂಗವಾಗಿದೆ ಎಂದು ಡಾ. ಹೊವಾರ್ಡ್ ಎ. ಕೆಲ್ಲಿ, ಜಾನ್ ಹೊಪ್ಕಿನ್ಸ್ ಯುನಿವರ್ಸಿಟಿಯವರಿಂದ ಹೇಳಲ್ಪಟ್ಟಿರುವುದು: "ಸ್ರವಿಸುವದಕ್ಕೆ ಮತ್ತು ಹೀರಿಕೊಳ್ಳುವದಕ್ಕೆ ಅದು ಕರುಳಿನ ಆಮದ ಮೇಲ್ಭಾಗವನ್ನು ಹೆಚ್ಚಿಸುತ್ತದೆ."[5]

(6) *ಪ್ರಾಣಿ ಇಲ್ಲವೇ ಸಸ್ಯಗಳ ಅವಶೇಷಗಳು.* ಪ್ರಾಣಿಗಳ ಎಲುಬುಗಳ

ಅವಶೇಷಗಳಿಂದ ಮತ್ತು ಬಂಡೆಗಳಲ್ಲಿ ಅವುಗಳ ಉಳಿಯುವಿಕೆಯಿಂದ, ಅನೇಕರು ಪರಿಣಾಮವನ್ನು ರುಜುವಾತು ಪಡಿಸಲು ಪ್ರಯತ್ನಿಸಿದ್ದಾರೆ. ಹಾಗಿದ್ದರೂ, ಆ ಎಲ್ಲಾ ಅವಶೇಷಗಳು ಅತೀ ಹೆಚ್ಚಾಗಿ ಬೆಳಿಸಲ್ಪಟ್ಟ ರೂಪಗಳು ಜೋಡಿಸುವ ಕೊಂಡಿಗಳಿಲ್ಲ, ಅರ್ಧ ಬೆಕ್ಕುಗಳು ಮತ್ತು ಅರ್ಧ ನಾಯಿಗಳಿಲ್ಲ, ಯಾವುದರ ಅರ್ಧವೂ ಇರುವದಿಲ್ಲ, ಅವಶೇಷಗಳು ಪುನರುತ್ಪತ್ತಿಯು ಈಗ ಇರುವಂತೆಯೇ ಯಾವಾಗಲೂ ಇತ್ತು ಎಂದು ಸಾಕ್ಷಿಕೊಡುತ್ತವೆ; ಪ್ರತಿಯೊಂದು ಜೀವಿಯು ತನ್ನ ಸ್ವಂತ ಜಾತಿಯದಾಗಿರುವುದು.

(7) *ಐದು ಕಾಲ್ಬೆರಳುಗಳ ಕುದುರೆ.* ಐದು ಕಾಲ್ಬೆರಳುಗಳುಳ್ಳ ಸುಮಾರು ಒಂದು ಕುರಿಯ ಗಾತ್ರದ ಒಂದು ಕುದುರೆಯನ್ನು ಹೋಲುವ ಕೆಲವು ಎಲುಬುಗಳು ದೊರೆತದ್ದರಿಂದ, ಇಂದಿನ ದೊಡ್ಡ ಕುದುರೆಯ ಪರಿಣಾಮವಾದದ ಒಂದು ಉದಾಹರಣೆ ತಮ್ಮಲ್ಲಿದೆಯೆಂದು ಅನೇಕರು ತೀರ್ಮಾಣಿಸಿದ್ದಾರೆ. ಚಿಕ್ಕ ಪ್ರಾಣಿಯಿಂದ ಕುದುರೆಯು ವಿಕಸೀತವಾಯಿತು ಎಂದು ಅವರು ಹೇಗೆ ತಿಳಿದಿರುವರು? ಚಿಕ್ಕ ಪ್ರಾಣಿಯೊಂದಿಗೆ ದೊಡ್ಡ ಕುದುರೆಯು ಜೀವಿಸಿರಲಿಲ್ಲ ಎಂದು ಅವರು ಹೇಗೆ ತಿಳಿದು ಕೊಂಡಿರುವರು?

(8) *ಕಳೆದು ಹೋದ ಕೊಂಡಿಗಳು.* ನಾಸ್ತಿಕ ಪರಿಣಾಮವಾದದ ಭಕ್ತರು ಬಹಳ ಸಲ, ಬಾಲವಿಲ್ಲದ ಕೋತಿ ಮತ್ತು ಮನುಷ್ಯನ ಮಧ್ಯದಲ್ಲಿ ಕೊಂಡಿಯನ್ನು ಕಂಡುಕೊಂಡಿದ್ದೇವೆಂದು ಜಗತ್ತಿಗೆ ಹೇಳುತ್ತಾರೆ. ಮಿಲ್ಲೆನ್ನೆಯದ ಹಿಂದೆ ಜೀವಿಸುತ್ತಿದ್ದ, ಬಾಲವಿಲ್ಲದ ಕೋತಿ ಮತ್ತು ಮನುಷ್ಯನ ಅರ್ಧ ಮಧ್ಯದಲ್ಲಿದ್ದ, ಪ್ರಸಿದ್ಧ ಮನುಷ್ಯರ ನಿಯಾಂಡರ್‌ತಾಲ್ ಜಾತಿಯು ತನ್ನ ಇತಿಹಾಸಕ್ಕಾಗಿ ಜರ್ಮನಿಯಲ್ಲಿ ದೊರತ ಒಂದು ತಲೆ ಬುರುಡೆಯನ್ನು ಹೊಂದಿದೆ. ದುರಾಗ್ರಹ ಪೀಢಿತ ವಿಕಾಸವಾದಿಗಳು ದೊರೆತ ಆ ತಲೆಬುರುಡೆಯಂಥ ತಲೆಬುರುಡೆಯೊಂದಿಗಿರುವ ಮಾನವರು ಇಂದು ಜೀವಿಸುತ್ತಿರುವರು ಎಂದು ಹೇಳುವದಿಲ್ಲ. ಪ್ರಿಸಿದ್ಧ ಜಾವಾ ಮನುಷ್ಯನಿಗೆ ವಿಶಾಲವಾದ ಪ್ರಸಿದ್ಧಿ ಸಿಗಬೇಕೆಂಬ ಉದ್ದೇಶದಿಂದ *Pithecanthropus erectus* ("erect ape-man") ಎಂದು ಹೆಸರು ಕೊಡಲ್ಪಟ್ಟಿತು; ಒಂದು ತಲೆಬುರುಡೆಯ ಭಾಗ, ಎರಡು ಹಲ್ಲುಗಳು ಮತ್ತು ಒಂದು ತೊಡೆಯ ಎಲುಬು ಇಷ್ಟೇ ಅವನಿಗೆ ಸಂಬಂಧಿಸಿದವು ಇದ್ದವು. ಈಗ, ವಿಜ್ಞಾನಿಗಳು ತೊಡೆಯ ಎಲುಬು ಮತ್ತು ಒಂದು ಹಲ್ಲು ಒಬ್ಬ ಮಾನವನದು ಮತ್ತು ತಲೆಬರುಡೆ ಹಾಗೂ ಒಂದು ಹಲ್ಲು (ಸುಮಾರು ಐವತ್ತು ಅಡಿ ದೂರದಲ್ಲಿ ದೊರೆತದ್ದು) ಒಂದು ಬಾಲವಿಲ್ಲದ ಕೋತಿಯದಾಗಿತ್ತೆಂದು ತಿಳಿದಿದ್ದರೆ, ಕೋತಿಯ ಅಸ್ತಿಪಂಜರದ ಮೇಲೆ ಮಾನವ ತಲೆಬುರುಡೆಯನ್ನು ಇಡುವಂತೆ, ಅಂಥ ಎಲುಬುಗಳ ಮಿಶ್ರಣದಿಂದ ಕೋಳಿಗಳು ಮಾನವ ಭಾಗವಾಗಿದ್ದವು ಎಂದು ಒಬ್ಬನು "ರುಜುವಾತು" ಪಡಿಸಬಹುದು. ಇಂಗ್ಲಾಂಡಿನಲ್ಲಿ ದೊರೆತ ಚಿಂಪ್ಯಾಂಜೀ ಎಲಬುಗಳ ಮತ್ತು ಮಾನವ ಎಲುಬುಗಳ ಬಗೆಗೂ ಹೀಗಿಯೇ ಇರುತ್ತದೆ; ಒಂದು ಗೂಡಿಸಿ, ಈ ಎಲುಬುಗಳು ಅಸ್ತಿಪಂಜರ ರಚನೆ ಮಾಡಲ್ಪಟ್ಟು, ಪರಿಣಾಮವಾದಿಗಳು ಅದನ್ನು *eoanthropus* ಎಂದು ಕರೆಯುತ್ತಾರೆ.

## ಅಸಂಬದ್ಧತೆಗಳು

ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು ಎಂದು ಕ್ರೈಸ್ತರು ಒಪ್ಪಿಕೊಳ್ಳುವಾಗ, ಹೆಚ್ಚಾದ ವಿಕಾಸವಾದಿಗಳು ನಕ್ಕು, "ಅಸಂಬದ್ಧ! ಅದು ನಿಸರ್ಗಕ್ಕೆ ವಿರುದ್ಧವಾದದ್ದಾಗಿದೆ" ಎಂದು ಹೇಳುವರು. ಹೀಗಿದ್ದರೂ, ಅವರಿಗೆ ಮೊಸಳೆಗಳ ಚರ್ಮದ ಪರೆಗಳು ರೆಕ್ಕೆಗಳಾಗುವವು ಎಂದು ನಂಬುವುದು ಅಸಂಬದ್ಧವಾಗುವದಿಲ್ಲ. ಕಪ್ಪೆಯ ತಣ್ಣಗಿನ ರಕ್ತ ಕೋಳಿಯ ಬಿಸಿ ರಕ್ತವಾಗುವದೆಂದು ನಂಬುವಲ್ಲಿ ಅವರಿಗೆ ಬಹಳ ಕಠಿಣವಾದದ್ದಾಗುವದಿಲ್ಲ.

ಹಾಗೆಯೇ ಅವರು ಸುಲಭವಾಗಿ, ಆಮೆಯ ಬಲ ಪಾದವು ಕೆಂಪು ಪಕ್ಷಿಯ ರೆಕ್ಕೆಯಾಗಿ ಬದಲಾಗುವದೆಂದು ಹೇಳುತ್ತಾರೆ.

ಬದಲಾಗಬಹುದಾದವುಗಳ ಕೆಲವು ಅಸಾಧ್ಯತೆಯು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿರ ಬೇಕು. ಉದಾಹರಣೆಯಾಗಿ, ಮೀನು ಭೂಮಿಯ ಪ್ರಾಣಿಗಳಾಗಿ ಬದಲಾಗುವದರಲ್ಲಿ, ಅವು ಹಾಕುವ ಮೊಟ್ಟೆಗಳ ರೀತಿಯು ಬದಲಾಗಬೇಕಾಗುತ್ತದೆ ಸಮುದ್ರದಲ್ಲಿ ಮೊಟ್ಟೆಯು ಸಾಕಷ್ಟು ಗಟ್ಟಿಯಾಗಿರುತ್ತದೆ ಆದರೆ ರಸವಾಗಿರುವದಿಲ್ಲ, ಅನಂತರದ್ದು ಸಮುದ್ರದಿಂದ ಒದಗಿಸಲ್ಪಡುತ್ತದೆ. ಭೂಮಿಯ ಮೇಲೆ, ಮೊಟ್ಟೆಯು ಚಿಪ್ಪಿನಿಂದ ಸುತ್ತಲ್ಪಟ್ಟಿರುತ್ತದೆ ಈ ಚಿಪ್ಪು ತತ್ತಿಯ ಬಿಲಿಲೊಳೆಯಿಂದ ನೀರನ್ನು ಹೊರಗೆ ಹಾಕಲು ಆಮ್ಲವನ್ನು ಭ್ರೂಣದಿಂದ ಬೇಡವಾದದ್ದನ್ನು ನೋಡಿಕೊಳ್ಳಲು ನೀರನ್ನು, ಮತ್ತು ಆ ಬೇಡವಾದದ್ದನ್ನು ಹಿಡಿದು ಕೊಳ್ಳಲು ಪ್ರತ್ಯೇಕವಾದ ದ್ರವಕೋಶವನ್ನು ಒಳಗೊಂಡಿರುತ್ತದೆ. ಇದಲ್ಲದೇ ಚಿಪ್ಪನ್ನು ಒಡೆಯುವದಕ್ಕಾಗಿ ಒಂದು ಚುಂಚನ್ನು ಭ್ರೂಣವು ಬೆಳಸಬೇಕಾಗುತ್ತದೆ ಇದೆಲ್ಲವೂ ಒಂದೇ ರಾತ್ರಿಯಲ್ಲಿ ಆಗಬೇಕು ಇಲ್ಲದಿದ್ದರೆ ಅಚ್ಚು ಜೀವಿಸಲಾರದು![6] ಅದು ಒಂದು ಮಿಲಿಯಕ್ಕಿಂತಲೂ ಹೆಚ್ಚು ವರ್ಷಗಳ ಕ್ರಮೇಣವಾದ ವಿಕಾಸವಾಗುವ ವಿಧಾನದಂತೆ ಕೇಳಿಸುತ್ತದೆಯೇ?

ತಿಮಿಂಗಲ ಮರಿಯು, ತಾಯಿ ತಿಮಿಂಗಲು ಒಂದು ಸಾವಿರ ವರ್ಷಗಳ "ಪರಿಣಾಮದ ಮುಖಾಂತರ, ಮರಿಯ ಮೂತಿಗೆ ಹೊಂದಿಕೊಳ್ಳುವಂತೆ, "ಹಾಲಿನೊಂದಿಗೆ ನೀರು ಮಿಶ್ರವಾಗದಂತೆ ತಡೆಗಟ್ಟಲು, ತನ್ನ ಮೊಲೆತೊಟ್ಟಿನ ಸುತ್ತ ಕವಚ ಬೆಳೆಯುವವರೆಗೆ ಹಾಲಿಗಾಗಿ ಏನು ಮಾಡುವುದು"?[7] ಮರಿ ತಿಮಿಂಗಲಿಗೆ ಹಾಲುಣ್ಣಿಸುವದರ ಮಧ್ಯದಲ್ಲಿ ಎಷ್ಟು ಸಮಯ ದಾಟಿ ಹೋಗುವುದು?

ಸಸ್ತನಿಗಳು ಹರಿದಾಡುವ ಜಂತುಗಳಿಂದ ವಿಕಾಸಹೊಂದಿದರೆ, ತಾಯಿ ಮತ್ತು ಮರಿಯು ಒಂದಾಗಿ ವಿಕಾಸಗೂಳ್ಳಬೇಕು, ಒಂದೇ ಸಂತತಿಯಲ್ಲಿ ಸಸ್ತನಿಗಳು ಮರಿಗಳು ಪೋಷಣೆ ಮಾಡತಕ್ಕದ್ದು. ತಾಯಿಯ ಮೊಲೆ ತೊಟ್ಟುಗಳನ್ನು ವಿಕಸಿಸಿಗೊಳ್ಳಬೇಕು ಮತ್ತು ಮರಿಯು ಮೃದುವಾದ ಬಲಿಷ್ಠ ತುಟಿಗಳನ್ನು ವಿಕಸಿಸಿಕೊಳ್ಳಬೇಕು.

ಪರಿಣಾಮವಾದದ ಊಹೆಯ ಅಸಂಬದ್ಧತೆಯನ್ನು ತೋರಿಸಲು ಮೇಲಿನ ಉದಾಹರಣೆಗಳು ಏನಾದರೂ ಕೊರತೆಯನ್ನು ಹೊಂದಿದ್ದರೆ, ಇದನ್ನು ಯೋಚಿಸಿರಿ. ಯೇಸುವು, ಒಬ್ಬನೇ ಪರಿಪೂರ್ಣ ಮನುಷ್ಯನು, ಸ್ವಾರ್ಥತೆಯ ಕುರುಹು ಇಲ್ಲದವನು, ಮಾನವರ ಅತೀ ದೊಡ್ಡ ಆಶೀರ್ವಾದವು, ಬಾಲವಿಲ್ಲದ ಕೋತಿಯ ಪೂರ್ವ ಜತೆಯಲ್ಲಿ ಭಾಗವಹಿಸುವನು ಎಂದು ಉತ್ಕ್ರಾಂತಿಯು ಹೇಳುತ್ತದೆ.

## ವಿರುದ್ಧವಾದ ಸಂಗತಿಗಳು

ಮನುಷ್ಯರು ಪ್ರಾಣಿಗಳ ಸುಮಾರು 900,000 ಜಾತಿವರ್ಗಗಳ ಬಗ್ಗೆ, ಸುಮಾರು ಮೂರು ಮಿಲಿಯ ತಳಿಗಳ ಬಗ್ಗೆ ಕಂಡು ಹಿಡಿದಿದ್ದಾರೆ. ಅವು ಪ್ರತಿಯೊಂದು "ತನ್ನ ತನ್ನ ಜಾತಿಗನುಸಾರವಾಗಿ" ಸಂತತಿ ಉತ್ಪಾದಿಸುತ್ತವೆ. ಸಾಕ್ಷಿಗಳ ಎಂಥಾ ಮೇಘ![8] ಸರ್ವಶಕ್ತನು ಆಜ್ಞಾಪಿಸಿದ್ದನ್ನು ಅವೆಲ್ಲವೂ ಮಾಡುತ್ತಿವೆ ಎಂದು ಮೋಶೆ ಹೇಳಿದನು: "*ಮತ್ತು ದೇವರು - 'ಭೂಮಿಯಿಂದ ಜೀವಜಂತುಗಳು ಉಂಟಾಗಲಿ; ಪಶುಕ್ರಿಮಿಗಳೂ ಕಾಡು ಮೃಗಗಳೂ ತಮ್ಮ ತಮ್ಮ ಜಾತಿಗನುಸಾರವಾಗಿ ಹುಟ್ಟಲಿ ಅಂದನು;' ಹಾಗೆಯೇ ಆಯಿತು"* (ಆದಿಕಾಂಡ 1:24; ಒತ್ತಿ ಹೇಳಿದ್ದು ನನ್ನದು). ಸೃಷ್ಟಿಯು ಪರಿಣಾಮವಾದವನ್ನು ಅಲ್ಲಗಳೆಯುತ್ತದೆ. ಆದರೆ ಪ್ರತಿದಿನ, ಹುಳಗಳಿಂದ ತಿಮಿಂಗಲುಗಳವರೆಗೆ ಮಿಲಿಯಗಟ್ಟಲೆ

ಮಾರ್ಗಗಳಲ್ಲಿ, ಮೋಶೆಯು ಸತ್ಯವನ್ನು ಹೇಳಿದನೆಂದು, ಸೃಷ್ಟಿಯು ಹೇಳುತ್ತದೆ.

ಪರಿಣಾಮವಾದಕ್ಕೆ ವಿರುದ್ಧವಾಗಿ ಇನ್ನೊಂದು ಧೈತ್ಯಾಕಾರದ ಸಂಗತಿ ಮನುಷ್ಯನು ತಾನೇ. ಮನುಷ್ಯನನ್ನು ಕೇವಲ ಪ್ರಾಣಿಗಳಲ್ಲಿ ಒಬ್ಬನಂತೆ ವರ್ಗೀಕರಿಸುವುದು ಯೋಗ್ಯ ವಾದದ್ದಾಗಿರುವದಿಲ್ಲ. ಕೇವಲ ದೈಹಿಕ ರೀತಿಯಲ್ಲಿ, ಅವನ ಕನಿಷ್ಠ ಸ್ಥಿತಿಯು ಯಾವುದೇ ಮನುಷ್ಯನು ಬಾಲವಿಲ್ಲದ ಕೋತಿಗೆ ಹೋಲಬಹುದು. ಮನುಷ್ಯನು ಶರೀರ, ಮನಸ್ಸು ಮತ್ತು ಪ್ರಾಣದೊಂದಿಗೆ ತ್ರಿತ್ವ ಜೀವಿಯಾಗಿದ್ದಾನೆ. ಅವನ ಪ್ರಾಣವು ಅವನ ದೇಹದಂತೆ ಒಂದು ಘಟನೆಯಾಗಿದೆ, ಮತ್ತು ಘಟನೆಗಳು ಕಠಿಣವಾದ ಸಂಗತಿಗಳಾಗಿವೆ. ಒಂದು ಮಾನಸಿಕ ವಿಧದಲ್ಲಿ, ಮನುಷ್ಯನು ಎಂದೂ ಪ್ರಾಣಿಗಳಿಗೆ ಹೋಲಿಕೆಯಲ್ಲಿರುವದಿಲ್ಲ. ಒಂದು ಮಂಗವು ಎಂಪಾಯರ ಸ್ಟೇಟ್ ಬಿಲ್ಡಿಂಗನ್ನು ಕಟ್ಟಲು ಪ್ರಾಂಭಿಸುವಾಗ ಇಲ್ಲದೇ *ಕ್ವೀನ್ ಮೇರಿಯಂಥ* ಹಡಗನ್ನು ರಚಿಸಲು ಪ್ರಾರಂಭಿಸುವಾಗ, ಅದರ ಮನಸ್ಸನ್ನು ಮನುಷ್ಯನ ಮನಸ್ಸಿನೊಂದಿಗೆ ಹೋಲಿಸುವ ಸಮಯವಾಗುವುದು.

ಪ್ರಾಣಿಗಳು ಪ್ರಗತಿ ಮಾಡುವದಿಲ್ಲಿ; ಅವು ಇತಿಹಾಸದಲ್ಲೆಲ್ಲಾ ಅದೇ ಮರಗ ಳಲ್ಲಿ ವಾಸಿಸುತ್ತಿರುವವು; ಅದೇ ಸಂಗತಿಗಳನ್ನು ಮಾಡುತ್ತಿರುವವು, ಭೂಮಿಯ ಮೇಲೆ ಮನುಷ್ಯನು ಮಾತ್ರವೇ ಪ್ರಗತಿಗೊಳ್ಳುವ ಜೀವಿಯಾಗಿದ್ದಾನೆ. ಮನುಷ್ಯನಿಗೆ ಮಾತಾಡುವ ಶಕ್ತಿಯಿರುವುದು, ಆದರೆ, ಪ್ರೊಫೆಸರ ಮ್ಯಾಕ್ಸ್ ಮ್ಯೂಲ್ಲರ ಅವರು ಭಾಷೆಗಳ ಮೇಲಿನ ತಮ್ಮ ಪುಸ್ತಕದಲ್ಲಿ "ಈ ಒಂದು ಸಂಗತಿಯನ್ನು ದಾಟಿ ಯಾವ ಪಶುವೂ ಹೋಗಲಾರದು ಎಂದು ಹೇಳುತ್ತಾರೆ."[9] ಕೊಲೆಗಾಗಿ ಯಾವುದೇ ಗೋರಿಲ್ಲಾ ಎಂದಾದರೂ ಬಂಧಿಸಲ್ಪಟ್ಟಿಲ್ಲ ಇಲ್ಲವೇ ನ್ಯಾಯ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುವದಿಲ್ಲ - ಅದು ಜವಾಬ್ದಾರವಾದದ್ದಲ್ಲ ಎಂದು ನಾವು ತಿಳಿದಿದ್ದೇವೆ, ಯಾಕಂದರೆ ಅದಕ್ಕೆ ಮಾನವನಿಗಿರುವಂಥದ್ದು ಇರುವುದಿಲ್ಲ; ಮನಸ್ಸಾಕ್ಷಿ, ನೈತಿಕತೆ, ಸರಿಯಾದದ್ದರ ಮತ್ತು ತಪ್ಪಾದದ್ದರ ಜ್ಞಾನ. ಮನುಷ್ಯನಿಗಿರುವ ಅನೇಕ ಸಂಗತಿಗಳಿವೆ, ಅವನಿಗೆ ಎರಡು ಕಾಲುಗಳಿರುವವು ಎಂಬ ಸಂಗತಿಯಂತೆಯೇ, ಅವುಗಳು ಅವನಿಗಿರುವವು ಎಂಬುದು ಒಂದು ಸಂಗತಿಯಾಗಿದೆ - ಮತ್ತು ಆ ಗುಣಲಕ್ಷಗಳನ್ನು ಅವನು ಗೊರಿಲ್ಲಾದಿಂದ ಇಲ್ಲವೇ ಯಾವುದೇ ಇತರ ಪ್ರಾಣಿಯಿಂದ ಹೊಂದಿಕೊಳ್ಳಲಿಲ್ಲ ಎಂಬ ಸಂಗತಿಯು ನಿಶ್ಚಿತವಾದದ್ದಾಗಿದೆ; ಯಾಕಂದರೆ ಅವುಗಳಿಗೆ ಅಂಥ ಗುಣಗಳಿರುವದಿಲ್ಲ. ಮನುಷ್ಯನು ಪ್ರಾಣಿಗಳೊಂದಿಗೆ ವರ್ಗೀಕರಿಸಲ್ಪಡಲಾರನು. ಭೂಮಿಗಿಂತ ಆಕಾಶಗಳು ಹೆಚ್ಚು ಎತ್ತರದಲ್ಲಿರುವಂತೆ, ಮನುಷ್ಯನು ಪ್ರಾಣಿಗಳ ಮೇಲೆ ಇರುತ್ತಾನೆ. ದೀನ ಆರಾಧನೆಯಲ್ಲಿ ಯಾವ ಪ್ರಾಣಿಯೂ ಉನ್ನತ ಶಕ್ತಿಗೆ ತಲೆಬಾಗುವದಿಲ್ಲ; ಆರಾಧನೆಯು ಏನಾಗಿದೆ ಎಂಬುದನ್ನು ಅದು ತಿಳಿದಿರುವದಿಲ್ಲ. ಮನುಷ್ಯನು ತಿಳಿದಿರುತ್ತಾನೆ; ಎಲ್ಲಾ ಜನರೂ ತಿಳಿದಿರುವರು. ಪ್ರತಿಯೊಬ್ಬ ಮನುಷ್ಯನು ಯಾವುದನ್ನಾದರೂ ಆರಾಧಿಸುವರು. ಏನನ್ನಾದರೂ ಯಾವುದೇ ಪ್ರಾಣಿ ಆರಾಧಿಸುವದಿಲ್ಲ. ಅದು ಅಲ್ಲಗಳೆಯದಂಥ ಸಂಗತಿಯಾಗಿದೆ ಮತ್ತು ಯಾವುದೂ ಇಲ್ಲದಿದ್ದ ಯಾವುದೋ ಮಗ ತಂದೆಯಿಂದ ಮಾನವನು ತನ್ನ ಆರಾಧನೆಯನ್ನು ಹೊಂದಿಕೊಳ್ಳಲಿಲ್ಲ: ಹೌದು, ಮನುಷ್ಯನು ಕಾರ್ಬನ್ ಸೋಡಿಯಮ್, ಹೈಡ್ರೋಜನ್ ಮತ್ತು ಇತರ ರಾಸಾಯನಿಕ ದ್ರವ್ಯಗಳಿಂದ ರಚಿಸಲ್ಪಟ್ಟಿದ್ದಾನೆ, ಆದರೆ ಅದು ಕೀಳಾದದ್ದು ಅಂದರೆ ಮಾಂಸ ಮಾತ್ರ ಆಗಿದೆ. ಮನುಷ್ಯನಿಗೆ ಇನ್ನೂ ಹೆಚ್ಚಾದದ್ದು ಇದೆ; ಮತ್ತು "ಹೆಚ್ಚಾದ" ಅದು ಆದಿಕಾಂಡ 2:7ರಲ್ಲಿ ಕೊಡಲ್ಪಟ್ಟದ್ದಕ್ಕಿಂತ ಹೆಚ್ಚು ಉತ್ತಮವಾದ ವಿವರಣೆಯುಳ್ಳದ್ದಾಗಿರುವದಿಲ್ಲ: ದೇವರು *"ಅವನ ಮೂಗಿನಲ್ಲಿ ಜೀವ ಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ* ಪ್ರಾಣಿಯಾದನು." (ಒತ್ತಿ ಹೇಳಿದ್ದು ನಿನ್ನದು.)

## ಅದರ ಪರಿಣಾಮಗಳು

ಪರಿಣಾಮವಾದವು ಜೀವದ ಯಾವುದೇ ಉದ್ದೇಶವನ್ನು ಬರಿದು ಮಾಡುತ್ತದೆ. ಮನುಷ್ಯನಿಗೆ ಆತ್ಮ ಇರದಿದ್ದರೆ, ಆಗ ಪುನರುತ್ಥಾನವಿರುವದಿಲ್ಲ ಮತ್ತು ಪರಲೋಕವು ಇರುವದಿಲ್ಲ, ಪರಲೋಕವಿಲ್ಲದೆ, ನೀನೆಷ್ಟು ತ್ಯಾಗ ಮಾಡಿದರೂ, ಇತರರಿಗೆ ಸಹಾಯ ಮಾಡಲು ಎಷ್ಟು ಕಷ್ಟಪಟ್ಟರೂ, ನಿಮಗೆ ಹಂದಿಗಿಂತ ಹೆಚ್ಚು ಬಹುಮಾನವಿರುವದಿಲ್ಲ. ನರಕವಿಲ್ಲದೇ, ಮನುಷ್ಯನು ಎಷ್ಟೇ ದುಷ್ಟನಾಗಿದ್ದರೂ - ಪ್ರಾಣಿಗಳು ಮಾಡದಂಥ ಸಂಗತಿಗಳನ್ನು ಮಾಡುತ್ತಿದ್ದರೂ - ಅವನಿಗೆ ಯಾವ ದಂಡನೆಯೂ ಬರುವದಿಲ್ಲ. ದೇವರ ವಾಗ್ದಾನಗಳಿಲ್ಲದೆ, ಜೀವನವು ವ್ಯರ್ಥತ್ವವಾಗುವುದು, ಎಲ್ಲಾ ಜೀವಿಗಳಲ್ಲಿ ಮನುಷ್ಯರು, ನಿರೀಕ್ಷೆಯು ಒಂದು ನಕ್ಷತ್ರವನ್ನು ನೋಡಲು ಮತ್ತು ತೇಳುವ ಪ್ರೀತಿಯು ರೆಕ್ಕೆಯ ಬಡಿತನವನ್ನು ಕೇಳಿಸಿಕೊಳ್ಳಲು ಅಶಕ್ತರಾದರೆ ಬಹಳ ದುಃಖಿತರಾಗುವರು.[10] ಪರಿಣಾಮ ವಾದವು ಸತ್ಯವಾದದ್ದಾಗಿದ್ದರೆ ಆಗ ಜೀವಿತವು ಅರ್ಥಹೀನವಾದದ್ದಾಗುತ್ತದೆ. ಹಾಗೂ ನಮ್ಮನ್ನು ಉಂಟುಮಾಡಿದ ವಿಕಾಸವಾದದ ದೇವರು ನಮ್ಮನ್ನು ಮೂದಲಿಸುವನು, ಹಾಗೂ ಹಿಂಸಿಸುವನು: ಜೀವಿಸುವ ಅರ್ಥದ ರುಚಿಯನ್ನು ಕೊಡುವನು, ನಾವು ಸದಾಕಾಲವೂ ಜೀವಿಸುವಂತೆ ಬಯಸುವ ಆಶೆ ಹುಟ್ಟಿಸುವನು, ಆಗ ಒಂದು ಹಸುವಿನ ಅಂತಿಮ ಸ್ಥಿತಿಯೊಳಗೆ ನಮ್ಮನ್ನು ಚಟಕ್ಕನೆ ಎಸೆದು ಬಿಡುವನು, ಅದು ಉತ್ಕ್ರಾಂತಿಯ ಪ್ರಕಾಶಮಯವಾದ, ನಿರೀಕ್ಷೆಯನ್ನು ಪ್ರೇರಿಸಲು ಸಂದೇಶವಾಗಿರುವದು.

*ಪರಿಣಾಮವಾದವು ಯೇಸುವನ್ನು ಸುಳ್ಳನ್ನಾಗಿ, ಸುಳ್ಳುಗಾರನನ್ನಾಗಿ ಮಾಡುತ್ತದೆ.* ಅದು ವಿಷಯವನ್ನು ಬಹಳ ಬಲವಾಗಿ ವ್ಯಕ್ತಪಡಿಸುತ್ತದೋ? ಇಲ್ಲ, ಕ್ರೈಸ್ತತ್ವಕ್ಕೂ ಪರಿಣಾಮವಾದಕ್ಕೂ ಮಧ್ಯದಲ್ಲಿ ದೊಡ್ಡ ಬಿರುಕು ಅಡ್ಡ ಬರುವದನ್ನು ಬೇಗನೇ ನೋಡುವಾಗ, ನಂತರದವರ ಹಿಡಿತವು ಬೇಗನೇ ಸಡಿಲವಾಗುವುದು. ಯೇಸುವು ಆದಿಕಾಂಡವನ್ನು ನಂಬಿದನು ಮತ್ತು ಅದರಿಂದ ಉಲ್ಲೇಖಿಸಿದನು (ನೋಡಿರಿ ಆದಿಕಾಂಡ 2:25; ಮತ್ತಾಯ 19:5; ಮಾರ್ಕ 10:7). ಆದಿಕಾಂಡವು ಸತ್ಯವನ್ನು ಹೇಳುತ್ತದೆ ಎಂದು ಪರಿಣಾಮವಾದಿಗಳು ನಂಬುವದಿಲ್ಲ, ಹೀಗೆ ಆದಿಕಾಂಡವನ್ನು ತಿರಸ್ಕರಿಸುವುದು ಯೇಸುವನ್ನು ತಿರಸ್ಕರಿಸುವುದಾಗಿದೆ. ಯೇಸುವಿನ ಹಿಂಬಾಲಕನಾಗಿದ್ದುಕೊಂಡು ಅದೇ ಸಮಯದಲ್ಲಿ ಮೋಶೆಯನ್ನು ತಿರಸ್ಕರಿಸುವುದು ಅಸಾಧ್ಯವಾದದ್ದಾಗಿದೆ, ಯಾಕಂದರೆ ಯೇಸುವು ಹೀಗೆ ಹೇಳಿದ್ದಾನೆ, "ಅವನು ನನ್ನ ವಿಷಯವಾಗಿ ಬರೆದನು; ಆದುದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ?" (ಯೋಹಾನ 5:46, 47; ಒತ್ತಿ ಹೇಳುದ್ದು ನನ್ನದು).

ಮನುಷ್ಯನು ಕೇವಲ ಉನ್ನತ ಪ್ರಾಣಿಯಾಗಿದ್ದರೆ, ಆಗ ಯೇಸುವಿನ ಮರಣವು ಕೇವಲ ನಾಚಿಕೆಯದ್ದಾಗಿರುತ್ತಿರಲಿಲ್ಲ - ಅದು ಮೂರ್ಖತನದ್ದಾಗುತ್ತಿತ್ತು, ಯಾಕಂದರೆ ಕೇವಲ ಪ್ರಾಣಿಗೆ ವಿಮೋಚನೆ ಅಗತ್ಯವಾಗಿರುವದಿಲ್ಲ. ಹಾಗಿದ್ದರೆ, ಯೇಸುವಿನ ಜಾಗರೂಕತೆಯಿಂದ ಯೋಜಿಸಿದ ಜೀವವು, ಎಲ್ಲಾ ಜನರ ಪಾಪಗಳಿಗಾಗಿ ಶ್ರಮೆಪಡಲು ಮತ್ತು ಸಾಯಲು ಆತನು ಯೆರೂಸಲೇಮಿಗೆ ಹೋಗುವುದು, ಎಲ್ಲವೂ ಪ್ರಯೋಜನ ವಾಗುತ್ತಿರಲಿಲ್ಲ. ಪರಿಣಾಮವಾದದ ಬೋಧನೆಗಳು ಸತ್ಯವಾಗಿದ್ದರೆ, ಮನುಷ್ಯರಿಗೆ ಪಾಪಗಳಿರುತ್ತಿರಲಿಲ್ಲ ಮತ್ತು ಅವರನ್ನು ರಕ್ಷಿಸುವದಕ್ಕಾಗಿ ನರಕವೇ ಇರುತ್ತಿರಲಿಲ್ಲ. ಉತ್ಕ್ರಾಂತಿಯ ಪರಿಣಾಮಗಳು ಯೇಸುವಿನ ಮುಖಾಂತರ ಮತ್ತು ಉತ್ಕ್ರಾಂತಿಯ ಮುಖಾಂತರವೂ ಸಹ ಆರಾಧಿಸುವದಕ್ಕೆ ಯಾರೂ ಕೇಳದಷ್ಟು ಉಗ್ರವಾದವುಗಳಾ ಗಿರುತ್ತವೆ.

**ಅದು ದಾಟಿ ಹೋಗುವುದು**

ಇನ್ನು ಕೆಲವು ವರ್ಷಗಳಲ್ಲಿ ಈ ಭ್ರಮೆಯು, "ವಿಜ್ಞಾನ" ಎಂದು ಸುಳ್ಳಾಗಿ ಕರೆಯಲ್ಪಟ್ಟದ್ದು, ಇತರ ಅನಾಗರಿಕ ಊಹೆಗಳೊಂದಿಗೆ ದಾಟಿಹೋಗುವುದು. ವೈಜ್ಞಾನಿಕ ಅಭಿಪ್ರಾಯಗಳೂ ಕಲ್ಪನೆಗಳೂ ಬರುತ್ತವೆ ಮತ್ತು ಹೋಗುತ್ತವೆ, ಇಂದು ಉಪಯೋಗಿಸಿದ ಪಠ್ಯಪುಸ್ತಕವು ನಾಳೆ ನಗೆಗೀಡಾಗುತ್ತದೆ. ದೇವರ ಪುಸ್ತಕಕ್ಕೆ ವ್ಯತಿರಿಕ್ತವಾದ ಎಲ್ಲಾ ಊಹೆಗಳು ಹುಲ್ಲಿನ ಹೂವಿಗೆ ಸಮಾನವಾಗಿವೆ: *"ಹುಲ್ಲು ಒಣಗಿ ಹೋಗುವುದು; ಹೂವು ಉದುರಿ ಹೋಗುವದು; ಕರ್ತನ ಮಾತೋ ಸದಾಕಾಲವೂ ಇರುವುದು"* (1 ಪೇತ್ರ 1:24ಬಿ, 25ಎ; ಒತ್ತಿ ಹೇಳಿದ್ದು ನನ್ನದು).

---

ಟಿಪ್ಪಣಿಗಳು

[1]Alfred W. McCann, *God-or Gorilla*, (New York: Devin-Adair Co., 1925), 154-55. [2]Quoted in Douglas Dewar, *Difficulties of the Evolution Theory* (London: Edward Arnold & Co., 1931), 39. [3]Ibid., 31. [4]*Oliphant-Smith Debate* (Nashville: Gospel Advocate Co., 1952), 128. [5]Ibid., 132. [6]Dewar, 68-69. [7]Ibid., 86. [8]Adapted from W. W. Otey, *Creation or Evolution* (Austin: Firm Foundation Publishing Co., 1930), 110. [9]E. M. Roberts, *The Mystery of Life* (St. Louis: Publicity Service Co., 1933), 511. [10]Adapted.

© 2009 Truth for Today